ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:.ವಿವಾದ:04/2016-17 ದಿ:19-08-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಅಗಸರ ಗಂಗಮ್ಮ ಗಂಡ: ದಿವಂಗತ ಅಗಸರ ಬಸಪ್ಪ
ಊಳೂರು ಗ್ರಾಮ ಸಿರುಗುಪ್ಪ ತಾಲೂಕ

2) ಎಂ. ಲಕ್ಷ್ಮೀ ಗಂಡ: ಮಲ್ಲಿಕಾರ್ಜುನ
ಊಳೂರು ಗ್ರಾಮ ತಾ: ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ರಾಮಚಂದ್ರ ತಂದೆ: ಅಗಸರಬಸಪ್ಪ
ಊಳೂರು ಗ್ರಾಮ ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಊಳೂರು ಗ್ರಾಮ | 96/3 | 2-01 | H-33/2015-16 | 170/2015-16 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಊಳೂರು ಗ್ರಾಮದ ಸ.ನಂ.96/3 ವಿಸ್ತೀರ್ಣ 2-01ಎಕರೆ** ಜಮೀನಿಗೆ ಸಂಭಂದಿಸಿದಂತೆ **ಸಿರುಗುಪ್ಪ ಸಬ್ ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ:SRG-1-07070/2015-16 Dt.19-01-2016** ರ **ಪ್ರಕಾರ** ಎ.ಲಕ್ಷ್ಮೀ ಗಂಡ: ಮಲ್ಲಿಕಾರ್ಜುನ ಇವರ **ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ರಾಮಚಂದ್ರ ತಂದೆ: ಲೇಟ್ ಆಗಸರ ಬಸಪ್ಪ ಊಳೂರು ಗ್ರಾಮ** ಇವರು **ದಿ: 29-01-2016** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು**ದಿ:10-06-2016, 24-06-2016, 22-07-2016 ಮತ್ತು 12-8-2016 ರಂದು ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

...ಗಳು

ವಾದಿಗಳಾದ 1) ಅಗಸರ ಗಂಗಮ್ಮ ಗಂಡ: ಅಗಸರ ಬಸಪ್ಪ ಲೇಟ್ ,ಊಳೂರು ಗ್ರಾಮ ಇವರು ಊಳೂರು ಗ್ರಾಮದ ಸ.ನಂ.**96/3** ವಿಸ್ತೀರ್ಣ 2-01ಎಕರೆ ಜಮೀನು ನನ್ನ ಹೆಸರಿಗೆ ಪಟ್ಟ ದಾಖಲಿದ್ದು ಸಿರುಗುಪ್ಪ ಸಬ್ ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ:**SRG-1-07070/2015-16 Dt.19-01-2016** ರ ಪ್ರಕಾರ ಎ.ಲಕ್ಷ್ಮೀ ಗಂಡ: ಮಲ್ಲಿಕಾರ್ಜುನ ಇವರ ಹೆಸರಿಗೆ ಕ್ರಯ ನೊಂದಣಿ ಮಾಡಿಕೊಟ್ಟಿರುತ್ತೇನೆ. ಹಕ್ಕು ಬದಲಾವಣೆ ಸಂದರ್ಭದಲ್ಲಿ ರಾಮಚಂದ್ರ ತಂದೆ: ಬಸಪ್ಪ ಊಳೂರು ಗ್ರಾಮ ಇವರು ವಿನಾಕಾರಣ ಆಧಾರ ರಹಿತವಾಗಿ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ಆಧಾರ ರಹಿತವಾದ ತಕರಾರು ಅರ್ಜಿಯನ್ನು ತಳ್ಳಿ ಹಾಕಿ ನೊಂದಣಿ ಪತ್ರಪ್ರಕಾರ ಖರೀದಿದಾರರಾದ ಎ.ಲಕ್ಷ್ಮೀ ಗಂಡ: ಮಲ್ಲಿಕಾರ್ಜುನ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡುವಂತೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

2) ವಾದಿಗಳಾದ ಎ.ಲಕ್ಷ್ಮೀ ಗಂಡ: ಮಲ್ಲಿಕಾರ್ಜುನ, ಊಳೂರು ಗ್ರಾಮ ಇವರು ಊಳೂರು ಗ್ರಾಮದ ಸ.ನಂ.**96/3** ವಿಸ್ತೀರ್ಣ 2-01ಎಕರೆ ಜಮೀನು ಅಗಸರ ಗಂಗಮ್ಮ ಗಂಡ: ಅಗಸರ ಬಸಪ್ಪ ನವರ ಹೆಸರಿನಲ್ಲಿ ಪಟ್ಟ ಇದ್ದ ಜಮೀನನ್ನು ಸಿರುಗುಪ್ಪ ಸಬ್‌ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ:**SRG-1-07070/2015-16 Dt. 19-01-2016**ರ ಪ್ರಕಾರ ನನ್ನ ಹೆಸರಿಗೆ ಕ್ರಯ ನೊಂದಣಿ ಮಾಡಿಕೊಂಡು ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ರಾಮಚಂದ್ರ ತಂದೆ: ಬಸಪ್ಪ ಊಳೂರು ಗ್ರಾಮ ಇವರು ವಿನಾಕಾರಣ ಆಧಾರ ರಹಿತವಾಗಿ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ಆಧಾರ ರಹಿತವಾದ ತಕರಾರು ಅರ್ಜಿಯನ್ನು ತಳ್ಳಿ ಹಾಕಿ ನೊಂದಣಿ ಪತ್ರಪ್ರಕಾರ ಎ.ಲಕ್ಷ್ಮೀ ಗಂಡ: ಮಲ್ಲಿಕಾರ್ಜುನ ಎಂಬ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡುವಂತೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ರಾಮಚಂದ್ರ ತಂದೆ: ಲೇಟ್ ಅಗಸರಬಸಪ್ಪ ಊಳೂರು ಗ್ರಾಮ ಇವರು ಸದ್ರಿ ಊಳೂರು ಗ್ರಾಮದ ಸ.ನಂ.**96/3** ವಿಸ್ತೀರ್ಣ 2-01 ಎಕರೆ ಜಮೀನಿನ ಹಕ್ಕು ಬದಲಾವಣೆ ಸಂದರ್ಭದಲ್ಲಿ ನನ್ನ ತಮ್ಮನಾದ ಮಲ್ಲಿಕಾರ್ಜುನ ತಂದೆ: ಲೇಟ್ ಅಗಸರ ಬಸಪ್ಪ ಇವರು ನಮಗೆ ತಿಳಿಸದೇ ಮುಟೇಷನ್ ಮಡಿಸಿಕೊಳ್ಳಲು ನಮ್ಮ ಗಮನಕ್ಕೆ ಕಂಡು ಬಂದಿರುತ್ತದೆ. ನನಗೆ ಭಾಗ ಇರುವುದರಿಂದ ಮುಟೇಷನ್ ಆಗದಂತೆ ತಡೆಹಿಡಿಯಲು ದಿ:29-1-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ.ದಿ:24-6-2016 ಹಾಗೂ 22-7-2016 ರ ವಿಚಾರಣಾ ದಿನಾಂಕಗಳಂದು ಹಾಜರಾಗಿರುತ್ತಾರೆ. ಯಾವುದೇ ಲಿಖಿತ ಹೇಳಿಕೆ ಆಗಲೀ ಅಥವಾ ಸಂಭಂದಪಟ್ಟ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ: **SRG-1-07070/2015-16 Dt.19-01-2016** ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಊಳೂರು ಗ್ರಾಮದ ಸ.ನಂ.96/3 ವಿಸ್ತೀರ್ಣ 2-01 ಎಕರೆ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಖರೀದಿ ಪತ್ರ ನಂ: **SRG-1-07070/2015-16 Dt. 19-01-2016** ರ ಪ್ರಕಾರ ಎ.ಲಕ್ಷ್ಮೀ ಗಂಡ: ಮಲ್ಲಿಕಾರ್ಜುನ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:19-08-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ತಹಶೀಲ್ದಾರರು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.